ಪ್ರಸ್ತಾಪ ಮಾಡಿದರು. ಅಲ್ಲಿ ರಿಸರ್ವಾಯರ್ ಮಾಡಿಕೊಂಡು ಅಲ್ಲಿಂದ ನೀರು ಸರಬರಾಜು ಮಾಡತಕ್ಕದ್ದಕ್ಕೆ

1.20 ಪಿಎಂ

ಸುಮಾರು 6 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಕೋಡಿ ಸರಿಯಾಗಿಲ್ಲದೆ ನೀರು ಹೋಗುತ್ತದೆ. ಕೋಡಿ ಬಿದ್ದುಹೋಗಿದೆ ಎಂದು ಹೇಳಿ, ವೇಸ್ಟ್‌ವೇರ್ ಸರಿ ಮಾಡಬೇಕೆಂದು ಕೇಳಿಕೊಂಡಿದ್ದಾರೆ. ಈಗಾಗಲೇ ಮರಳು ಚೀಲಗಳನ್ನು ಹಾಕಿ ರೈತರು ತಡೆಹಿಡಿದಿದ್ದಾರೆಂದು ಅವರು ಹೇಳಿದ್ದು, ಅದರ ಬಗ್ಗೆ ಆಗಲೇ ಅವರು ಒಂದು ಪತ್ರವನ್ನು ಕೊಟ್ಟಿದ್ದಾರೆ. ಅವರು ಪತ್ರ ಕೊಟ್ಟಾದ ಮೇಲೆ ನಾನು ಮುಖ್ಯ ಇಂಜಿನಿಯರ್‌ರವರೊಡನೆ ಮಾತನಾಡಿದ್ದೇವೆ ಕೂಡಲೇ ಕ್ರಮ ತೆಗೆದುಕೊಂಡು ನೀರನ್ನು ನಿಲ್ಲಿಸುವಂತಹ ವ್ಯವಸ್ಥೆಯಾಗಬೇಕಾಗಿದೆ; ವೇಸ್ಟ್ ವೇರ್‌ರಿಪೇರಿ ಏನಿದೆ ಅದನ್ನು ಮಾಡಬೇಕೆಂದು ಹೇಳಿದ್ದೇನೆ. ಹಾಗೆಯೇ, ಕೆಸಿಸಿಯವರಾಗಲೀ ಅಥವಾ ನಮ್ಮ ಇಲಾಖೆಯವರಾಗಲೀ ಕಳಪೆ ಕೆಲಸ ಮಾಡಿದ್ದರೆ, ಯಾರು ಕಳಪೆ ಕೆಲಸ ಮಾಡಿದ್ದಾರೋ, ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳ ಬೇಕು ಮತ್ತು ಕಂಟ್ರಾಕ್ಟರ್ ಏನಾದರೂ ಮಾಡಿದ್ದರೆ ಎಂಬ ಪ್ರಶ್ನೆಯನ್ನು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಮಾನ್ಯ ಸದಸ್ಯರು ತಿಳಿಸಿದ ಕೂಡಲೇ, ಇವತ್ತು ವೇಸ್ಟ್‌ವೇರ್ ರಿಪೇರಿಯಾದ್ದರಿಂದ, ಕೂಡಲೇ ಅದರ ಕೆಲಸ ತೆಗೆದುಕೊಳ್ಳಬೇಕೆಂದು ಅಲ್ಲಿನ ಅಧಿಕಾರಿಗೆ ಆದೇಶವನ್ನೂ ಸಹ ಕೊಟ್ಟಿದ್ದೇವೆ. ಮತ್ತೆ, ಅಲ್ಲಿ ಏನೇನು ಕೆಲಸ-ಕಾರ್ಯಗಳಾಗಿದೆ ಎನ್ನುವುದರ ಬಗ್ಗೆ ಮತ್ತು ಅಲ್ಲಿಗೆ ಯಾವ ಇಂಜಿನಿಯರ್‌ರೂ ಹೋಗಿಲ್ಲವೆನ್ನುವುದರ ಬಗ್ಗೆ ತಿಳಿದು ಮಾನ್ಯ ಸದಸ್ಯರಿಗೆ ನಾಳೆ ಸಂಪೂರ್ಣ ವಿಷಯವನ್ನು ನಾನೇ ತಮ್ಮ ಹತ್ತಿರ ಮಾತನಾಡಿ ತಿಳಿಸುತ್ತೇನೆ. ಅಲ್ಲಿ ಏನೇನಾಗಿದೆ ಎಂದು ಹೇಳಿ, ಏನು ರಕ್ಷಣೆ ಕೊಡಬೇಕೋ, ಆ ರಕ್ಷಣೆಯನ್ನು ಕೊಡುವಂತಹ ಕಾರ್ಯವನ್ನು ನಾನು ಮಾಡುತ್ತೇನೆ. ಪರಿಹಾರದ ಬಗ್ಗೆ ಮಾನ್ಯ ಸದಸ್ಯರು ತಿಳಿಸಿದ್ದಾರೆ. ಆ ಪರಿಹಾರದ ಹಣವನ್ನು ನಾವು ಅವರಿಗೆ ತುಂಬಿದ್ದೇವೆ. ಏಕೋ, ಏನೋ ತಡಮಾಡುತ್ತಿದ್ದಾರೆ ಎನ್ನುವುದರ ಬಗ್ಗೆ....

ಶ್ರೀ ಮಂಜುನಾಥ ಸಿ. ಕುನ್ನೂರ್: 3 ವರ್ಷಗಳಾಯಿತು. ತಾವು ಹಣವನ್ನು ತುಂಬಿದಿರಿ. ಜಿಲ್ಲಾಧಿಕಾರಿಗಳು ಹಣವನ್ನು ಕೊಡುತ್ತಿಲ್ಲ.

ಶ್ರೀ ಬಿ.ಎನ್.ಬಚ್ಚೇಗೌಡ: ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟು, ಅದು ಏನಾದರೂ ಕಾನೂನಿನ ತೊಡಕಾಗಿರಬಹುದೇ ಎಂಬುದನ್ನು ತಿಳಿದು ಅವರಿಗೆ ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೇನೆ.

ಆ) ಕೆ.ಜಿ.ಎಫ್. ಮುನಿಸಿಪಾಲಿಟಿಯಲ್ಲಿ ರೆಕಾರ್ಡ್‌ಗಳು ನಾಪತ್ತೆ.

ಶ್ರೀ ಎಸ್.ರಾಜೇಂದ್ರನ್ (ಕೆ.ಜಿ.ಎಫ್): ಮಾನ್ಯ ಉಪಸಭಾಧ್ಯಕ್ಷರೆ, ಜೀರೋ ಅವರ್‌ನಲ್ಲಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದು ನನಗೆ ಬಹಳ ಸಂತೋಷವಾಗಿದೆ. ನಮ್ಮ ಕೆ.ಜಿ.ಎಫ್. ಕಾನ್‌ಸ್ಟಿಟ್ಯೂಯೆನ್ಸಿಯಲ್ಲಿ ಬೇಕಾದಷ್ಟು ಮಾಲ್ ಅಡ್ಮಿನಿಸ್ಟ್ರೇಷನ್ ನಡೆಯುತ್ತಿದೆ. I have written so many letters to the Municipality, but no reply. I have written a letter to the Deputy commissioner, no reply. I contacted the Director of Municipality but no reply has been received. Finally submitted it to the Principal Secretary, HUD-1 ಅದು ಕೊಟ್ಟು 8 ತಿಂಗಳಾಗಿದೆ. 8 ತಿಂಗಳಿಂದ ನೋ ರಿಪ್ಲೈ. I brought this to the Minister's notice also. In front of the Minister I asked the Principal Secretary. He said, ಡಾಕ್ಯುಮೆಂಟ್ಸ್ ನಮ್ಮ ಸರ್ಕಾರದಲ್ಲಿಲ್ಲ ಎಂದರು I showed those bogus documents, false documents, all the documents which I brought it to the notice of the Government ಸರ್ಕಾರ ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಜಮೀನನ್ನು ಪ್ರೈವೇಟ್‌ಗೆ ಕೊಟ್ಟಿದೆ. ಅದರ ಮೇಲೆ, ಸರ್ಕಾರದ ಉತ್ತರವೇನೆಂದರೆ, ನಮ್ಮಲ್ಲಿ ಆ ರೆಕಾರ್ಡ್ಸ್ ಇಲ್ಲ ಎಂದು When there is no record how can they run the administration? 20 ವರ್ಷಗಳ ಮುಂಚೆ ಎಜ್ಯುಕೇಷನ್ ಮಿನಿಸ್ಟರ್ ಕಾಪಿ ಹೊಡೆದಿರುವ ಬಗ್ಗೆ ಸರ್ಕಾರದಲ್ಲಿ ರೆಕಾರ್ಡ್ಸ್ ಇರುವುದು, the matter was 10 years old; ಆದರೆ ಸರ್ಕಾರ ಕೊಟ್ಟಿರುವ ಲ್ಯಾಂಡ್ ರೆಕಾರ್ಡ್ ಇಲ್ಲವೇ? Therefore, I demand that hon'ble Minister for Municipality to send this to the Lok Ayukta to find out and to book criminal cases against those who are involved in the Municipal Administration.

ಶ್ರೀ ಮಿರಾಜುದ್ದೀನ್ ಎನ್.ಪಟೇಲ್ (ಪೌರಾಡಳಿತ ಸಚಿವರು): ಮಾನ್ಯ ಉಪಸಭಾಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಎಸ್.ರಾಜೇಂದ್ರರವರು ಆಫೀಸ್‌ನಲ್ಲಿ ರೆಕಾರ್ಡ್ ಇಲ್ಲವೆಂದು ಅವರೇನು ಅಲಿಗೇಷನ್ಸ್ ಮಾಡುತ್ತಿದ್ದಾರೆ, ಇದಕ್ಕೆ ಬದಲು ಅವರು ಹೇಳಿದ ಪ್ರಕಾರ, ನಾನು ಅವರ ಮುನಿಸಿಪಾಲಿಟಿಗೆ ಹೋಗಿ, ಅವರಿಗೆ ಮತ್ತು ಅಲ್ಲಿನ ಅಧ್ಯಕ್ಷರು ಹಾಗೂ ಕಮಿಷನರ್‌ರವರ ಜೊತೆ ಮಾತನಾಡಿ, ಅವರು ಯಾವುದನ್ನು ಕೇಳಿದ್ದಾರೆ, ಅದರ ಬಗ್ಗೆ ನಾನು ಕೇಳಿದೆ. ಆಮೇಲೆ, ಈ ಕಮೀಷನರ್‌ರವರು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಇವರ ಮೇಲೆ ಬಹಳ ಅಲಿಗೇಷನ್ಸ್ ಇದೆ, ಇವರನ್ನು ಚೇಂಜ್ ಮಾಡಬೇಕೆಂದರು. ಆದ್ದರಿಂದ, ಅವರನ್ನು ಟ್ರಾನ್ಸ್‌ಫರ್ ಮಾಡಿ, ಆ ಜಾಗಕ್ಕೆ